**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿಇ/ಸಿಆರ್/ಅನುದಾನ/01/2006-07

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರ, 18ನೇ ಅಡ್ಡರಸ್ತೆ,
ಸಂಪಿಗೆ ರಸ್ತೆ, ಬೆಂಗಳೂರು-12.
ದಿನಾಂಕ: 25-05-2018.

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು,
ಪದವಿ ಪೂರ್ವ ಶಿಕ್ಷಣ ಇಲಾಖೆ,

ಮಾನ್ಯರೆ,

ವಿಷಯ:- ಕಾರ್ಯಭಾರದ ಕೊರತೆ ಇರುವ ಉಪನ್ಯಾಸಕರನ್ನು ಅನುದಾನಿತ ಪದವಿ ಕಾಲೇಜಿನ ಬದಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿರುವ ಖಾಲಿ ಹುದ್ದೆಗೆ ನಿಯೋಜಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಇಡಿ 18 ಟಿಪಿಯು 2018 ದಿನಾಂಕ 17-05-2018.

*****

ದಿನಾಂಕ 01-06-1997 ರಿಂದ 1994-95ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟು ಸತತವಾಗಿ ನಡೆಯುತ್ತಿರುವ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರದ ಆದೇಶದ ಸಂಖ್ಯೆ: ಇಡಿ 63 ಟಿಪಿಯು 2003 ದಿನಾಂಕ 07-05-2007, ಸರ್ಕಾರದ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006 ದಿನಾಂಕ 06-10-2007 ಮತ್ತು ಇಡಿ 217 ಪಿಎಂಸಿ 2008 ದಿನಾಂಕ 08-09-2008ರ ಆದೇಶಗಳಲ್ಲಿ ಅವಕಾಶ ಕಲ್ಪಿಸಿದೆ. ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 1994-95ನೇ ಸಾಲಿನ ಒಳಗೆ ಪ್ರಾರಂಭಿಸಲ್ಪಟ್ಟಿರುವ ಕಾಲೇಜುಗಳಲ್ಲಿನ ವಿಷಯಗಳ ಉಪನ್ಯಾಸಕರ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಿರುವ ಸರ್ಕಾರದ ಆದೇಶದಲ್ಲಿ ಕಾರ್ಯಭಾರ ಸರಿದೂಗಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 76 ಟಿಪಿಯು 2012 ದಿನಾಂಕ 23-01-2017 ರಲ್ಲಿ ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜಿಸಿರುವುದನ್ನು ರದ್ದುಪಡಿಸಿ, ಇವರುಗಳನ್ನು ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಉಪನ್ಯಾಸಕರ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜಿಸಿ ಕಾರ್ಯಭಾರ ಸರಿದೂಗಿಸುವಂತೆ ಆದೇಶಿಸಿದೆ. ಸರ್ಕಾರದ ಸದರಿ ಆದೇಶದ ಅನ್ವಯ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಇಂತಹ ಪ್ರಕರಣಗಳ ಕುರಿತು ಕ್ರಮ ಕೈಗೊಂಡು ಸೂಕ್ತ ಪ್ರಸ್ತಾವನೆ ಸಲ್ಲಿಸಲು ಈ ಮೂಲಕ ತಿಳಿಸಿದೆ. ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ತಮ್ಮ ನಂಬುಗೆಯ

25/5/2018

ಜಂಟಿ ನಿರ್ದೇಶಕರು(ಮಾ&ಅ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು ಪಪೂಶಿಇ, ಮಲ್ಲೇಶ್ವರ, ಬೆಂಗಳೂರು.
2. ಮಾನ್ಯತೆ ಮತ್ತು ಅನುದಾನ ಶಾಖೆಯ ಎಲ್ಲಾ ಶಾಖಾಧಿಕಾರಿಗಳು/ಅಧೀಕ್ಷಕರು/ವಿಷಯ ನಿರ್ವಾಹಕರು- ಸೂಕ್ತ ಕ್ರಮಕ್ಕಾಗಿ.
3. ಇ-ಆಡಳಿತ ಶಾಖೆ-ಅಂತರ್ಜಾಲದಲ್ಲಿ ಅಳವಡಿಸಲು.
4. ಕಚೇರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾರ್ಯಭಾರದ ಕೊರತೆ ಇರುವ ಉಪನ್ಯಾಸಕರನ್ನು ಅನುದಾನಿತ ಪದವಿ ಪೂರ್ವ ಕಾಲೇಜಿನ ಬದಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿರುವ ಖಾಲಿ ಹುದ್ದೆಗೆ ನಿಯೋಜಿಸುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 76 ಟಿಪಿಯು 2012 ದಿನಾಂಕ:23-01-2017.

2) ಶ್ರೀಮತಿ ರಮಾಮಣಿ ಕೆ.ಆರ್. ಮತ್ತು ಇತರ 15 ಉಪನ್ಯಾಸಕರುಗಳ ಮನವಿ ದಿನಾಂಕ:27-04-2018.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಸುತ್ತೋಲೆಯನ್ವಯ ಅನುದಾನಕ್ಕೆ ಒಳಪಡಿಸಲಾಗಿರುವ ಸರ್ಕಾರದ ಆದೇಶಗಳಲ್ಲಿ ನಿಗದಿತ ಕಾರ್ಯಭಾರ ಇಲ್ಲದಿರುವ ಉಪನ್ಯಾಸಕರಿಗೆ ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿನ ಸಂಬಂಧಿಸಿದ ವಿಷಯದ ಖಾಲಿ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜನೆ ಮಾಡಿ ಕಾರ್ಯಭಾರ ಸರಿದೂಗಿಸಲು ಷರತ್ತು ವಿಧಿಸಲಾಗಿತ್ತು. ಆದರೆ. ನಿಯೋಜಿಸಿರುವ ಅನುದಾನಿತ ಕಾಲೇಜುಗಳು 25 ಕಿ.ಮೀ. ದೂರವಿದ್ದು, ಬೇರೆ ಜಿಲ್ಲೆಗೂ ನಿಯೋಜನೆ ಮಾಡಿರುವುದರಿಂದ ವೇತನ ಬಿಡುಗಡೆಯಾಗಿರುವುದಿಲ್ಲ. ಆದ್ದರಿಂದ ಅನುದಾನಿತ ಕಾಲೇಜಿಗೆ ನಿಯೋಜಿಸಿರುವ ಬದಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿನ ಖಾಲಿ ಹುದ್ದೆಗೆ ನಿಯೋಜಿಸಿ, ವೇತನ ಬಿಡುಗಡೆ ಮಾಡುವಂತೆ ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತಂತೆ ಪರಿಶೀಲಿಸಲಾಗಿ, ಕಾರ್ಯಭಾರ ಸರಿದೂಗಿಸಲು ಅನುದಾನಿತ ಕಾಲೇಜುಗಳಿಗೆ ನಿಯೋಜನೆ ಮಾಡಿರುವುದು ಕಾರ್ಯಗತವಾಗಿಲ್ಲದಿರುವುದನ್ನು ಪರಿಗಣಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 18 ಟಿಪಿಯು 2018, ಬೆಂಗಳೂರು, ದಿನಾಂಕ:17-05-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 76 ಟಿಪಿಯು 2012 ದಿನಾಂಕ:23-01-2017ರನ್ವಯ ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿನ ಅನುದಾನರಹಿತ ಉಪನ್ಯಾಸಕರನ್ನು ಅನುದಾನಕ್ಕೆ ಒಳಪಡಿಸಿರುವ ಸರ್ಕಾರದ ಆದೇಶದಲ್ಲಿ ಕಾರ್ಯಭಾರ ಸರಿದೂಗಿಸಲು ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜಿಸಿರುವುದನ್ನು ರದ್ದುಪಡಿಸಿ, ಇವರುಗಳನ್ನು ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಉಪನ್ಯಾಸಕರ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜಿಸಿ, ಕಾರ್ಯಭಾರ ಸರಿದೂಗಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶೇಖರ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ).

**ಇವರಿಗೆ:-**

1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
2. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.